MVC No.10/2023 PW-1

(ಇಂದು ದಿನಾಂಕಃ 31-05-2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು)

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಸ. ಎಸ. ಎ ವಕೀಲರಿಂದ (ಅರ್ಜಿದಾರರ ಪರ)**

- ಗುದಗೆ ಆಸ್ಪತ್ರೆಯ ಸಲಹೇ ಚೀಟಿಯನ್ನು ಸಲ್ಲಿಸಿದ್ದು ಅದನ್ನು ನಿ.ಪಿ-18 ಎಂದು, ಗುರುತಿಸಲಾಯಿತು.

ಅದರಂತೆ ನನ್ನ ಅರ್ಜಿಯಲ್ಲಿ ಕೋರಿರುವಂತೆ ಅವಾರ್ಡ ಮಾಡಲು ವಿನಂತಿಸಿಕೊಳ್ಳುತ್ತೇನೆ.

**ಪಾಟೀ ಸವಾಲು ಶ್ರೀ ವಿ.ವಿ.ಸಿ ಎದುರುದಾರ ಪರ ವಕೀಲರಿಂದಃ**

1. ದಿಃ08-08-2018 ರಂದು ಅಪಘಾತ ಆಗಿದೆ. ಅಪಘಾತ ಆದ ನಂತರ ನನ್ನ ಸಂಬಂಧಿಕರಾದ ಜಣಪ್ಪರವರು ದಿನಾಂಕಃ 12-08-2018 ರಂದು ಚಿಂಚೋಳಿ

ಪೋಲೀಸ ಠಾಣೆಗೆ ದೂರು ಕೊಟ್ಟಿದ್ದರು. ಜರಣಪ್ಪ ನನ್ನ ಚಿಕ್ಕಪ್ಪ ಇರುತ್ತಾರೆ. ಅಪಘಾತವು ರಾತ್ರಿ 8:00 ಗಂಟೆಗೆ ಸಾಯಿ ಧಾಬಾ ಹತ್ತಿರ ಆಗಿದೆ. ಸದರಿ ಧಾಬಾ ಚಿಂಚೋಳಿಯಿಂದ ಸ್ವಲ್ಪ ದೂರದಲ್ಲಿ ಇದೆ. ಆ ದಿನ ನಾನು ನಾಗಾ ಇದಲಾಯಿಯಿಂದ ತುಮಕುಂಟಾಕೆ ಹೋಗುತ್ತಿದ್ದೆ. ನಾನು ನಾಗಾ ಇದಲಾಯಿಯಿಂದತುಮಕುಂಟಾಕೆ ಬೈಕ ಮೇಲೆ ನಾನು ಒಬ್ಬನೆ ಹೋಗುತ್ತಿದ್ದೆ. ನನ್ನ ಬೈಕ ನಂಬರ ಕೆ.ಎ 32 ಇ ಎಲ 7967 ಇರುತ್ತದೆ. ಅಪಘಾತ ಆದಾಗ ಜರಣಪ್ಪ ಬಸನಿಲ್ದಾಣ ಹತ್ತಿರ ಇದ್ದರು. ಅಪಘಾತ ಸ್ಥಳದಿಂದ ಬಸ ನಿಲ್ದಾಣ ಸ್ವಲ್ಪ ದೂರದಲ್ಲಿ ಇರುತ್ತದೆ. ನನಗೆ ಅಪಘಾತವನ್ನು ಜರಣಪ್ಪ ನೋಡಿರುತ್ತಾನೆ. ಅಪಘಾತದ ಬಗ್ಗೆ ಜರಣಪ್ಪರವರಿಗೆ ಸತೀಷರೆಡ್ಡಿ ಹೇಳಿರುತ್ತಾರೆ. ಸತೀಷರವರು ಕಿರಾಣಿ ಅಂಗಡಿಯ ಹತ್ತಿರ ಇದ್ದರು. ಅಪಘಾತದ ಸ್ಥಳದ ಚಕ್ಕಬಂದಿಯ ಪ್ರಕಾರ ಘಟನಾ ಸ್ಥಳದಲ್ಲಿ ಸುತ್ತಮುತ್ತಲಿನಲ್ಲಿ ಕಿರಾಣಿ ಅಂಗಡಿ ಮತ್ತು ಬಸ ನಿಲ್ದಾಣ ಇದೆ ಎಂದು ಬರೆದಿಲ್ಲ ಎಂದರೆ ಸಾಕ್ಷಿಯು ದೂರದಲ್ಲಿ ಇದೆ ಎಂದು ಹೇಳುತ್ತಾರೆ. ಅಂತಿಮವರದಿಯಲ್ಲಿ ಘಟನಾ ಸ್ಥಳದ ನಕ್ಷೆ ಇಲ್ಲ ಎಂದರೆ ಸರಿ. ನನ್ನ ದೂರಿನಲ್ಲಿ ಬರೆದ ಎಲ್ಲಾ ವಿಷಯಗಳು ನಿಜ ಇರುತ್ತವೆ.

2. ನಾನು 10 ನೇ ತರಗತಿಯವರೆಗೆ ಓದಿದ್ದೇನೆ. ನನಗೆ ಅಪಘಾತ ಪಡಿಸಿದ ಗಾಡಿ ನಂಬರ ದೂರಿನಲ್ಲಿ ಬರೆದಿಲ್ಲ ಆದರೆ ಮೋಟರ ಸೈಕಲನಿಂದ ಅಪಘಾತ ಆಗಿದೆ ಎಂದು ಬರೆದಿರುತ್ತಾರೆ. ಇಂತಹ ವಾಹನದಿಂದ ಅಪಘಾತ ಆಗಿದೆ ಎಂದು ನಾನು ಪೋಲೀಸರಿಗೆ ಪೋಲೀಸ ಠಾಣೆಗೆ ಹೋಗಿ ಹೇಳಿರುತ್ತೇನೆ. ನನ್ನ ಹೇಳಿಕೆಯಲ್ಲಿ ಕೆ.ಎ 32 ಇ.ಎಸ 1197 ಮೋಟರ ಸೈಕಲನಿಂದ ಅಪಘಾತ ಆಗಿದೆ ಎಂದು ಹೇಳಿರುತ್ತೇನೆ. ಸದರಿ ಮೋಟರ ಸೈಕಲ ನನಗೆ ಹಿಂದಿನಿಂದ ಬಂದು ಡಿಕ್ಕಿಪಡಿಸಿರುತ್ತದೆ. ಡಿಕ್ಕಿ ಪಡಿಸಿದ್ದರಿಂದ ನಾನು ಮತ್ತು ನನ್ನ ವಾಹನ ಕೆಳಗೆ ಬಿತ್ತು, ಅವರು ಅಪಘಾತ ಪಡಿಸಿ ಗಾಡಿಯನ್ನು ಬಿಟ್ಟು ಓಡಿ ಹೋಗಿರುತ್ತಾರೆ. ಅವರು ಅಪಘಾತ ಪಡಿಸಿ ಗಾಡಿಯನ್ನು

ಬಿಟ್ಟು ಓಡಿ ಹೋದ ನಂತರ ನನ್ನ ಪ್ರಜ್ಞೆ ತಪ್ಪಿರುತ್ತದೆ. ನನ್ನನ್ನು ಆಸ್ಪತ್ರೆಗೆ ಜರಣಪ್ಪ, ಸತೀಷರೆಡ್ಡಿ ಮತ್ತು ಪಾಂಡು ಎಂಬುವವರು ಚಂದಾಪುರದಲ್ಲಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿಂದ ನಾನಗೆ ಬೀದರಿನ ಗುದಗೆ ಕರೆದುಕೊಂಡು ಹೋದರು. ಬೀದರಿನ ಗುದಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಗಾಂಧಿ ಆಸ್ಪತ್ರೆಗೆ ಹೋದ ನಂತರ ಅಲ್ಲಿ ನನ್ನ ಜೊತೆ ಇದ್ದವರು ನನಗೆ ಗಾಯ ಹೇಗೆ ಆಗಿದೆ ಎಂದು ಹೇಳಿ ಬರೆಸಿರುತ್ತಾರೆ. ನಿ.ಪಿ-11ರ ಪ್ರಕರ ನಾನು ಕುಡಿದ ಅಮಲಿನಲ್ಲಿದ್ದು ಗಾಡಿಯಿಂದ ಬಿದ್ದು ಗಾಯ ಮಾಡಿಕೊಂಡಿರುತ್ತೇನೆ ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಾನೇ ಸ್ವತಃ ಬಿದ್ದು ಗಾಯ ಮಾಡಿಕೊಂಡಿದ್ದರು ಸಹ ಪರಿಹಾರ ಪಡೆಯುವ ಉದ್ದೇಶದಿಂದ ಕೆ.ಎ 32 ಇ.ಎಸ 1197 ಮೋಟರ ಸೈಕಲ ಮೇಲೆ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಗಾಂಧಿ ಆಸ್ಪತ್ರೆಯಲ್ಲಿ ಮೊದಲು 12 ದಿನ ಇದ್ದೆ. ನಾನು ಗಾಂಧಿ ಆಸ್ಪತ್ರೆಗೆ ಒಟ್ಟು 3 ಸಲ ಹೋಗಿರುತ್ತೇನೆ. ನಾನು ಗುಲಬರ್ಗಾದ ಕಟೋರಿ ಆಸ್ಪತ್ರೆಗೆ ತೋರಿಸಿರುತ್ತೇನೆ. ಕೆ.ಎ 32 ಇ.ಎಸ 1197 ಮೋಟರ ಸೈಕಲ ಚಾಲಕನ ಹತ್ತಿರ ಚಾಲನಾ ಪರವಾನಿಗೆ ಇರಲಿಲ್ಲ ಎಂದು ಪೋಲಿಸರು ತಮ್ಮ ಅಂತಿಮ ವರದಿಯಲ್ಲಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಚಾಲನಾ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನನ್ನ ಚಾಲನಾ ಪರವಾನಿಗೆ ಇರಲಿಲ್ಲ ನಾನು ಕುಡಿದ ಅಮಲಿನಲ್ಲಿ ಗಾಡಿಯಿಂದ ಬಿದ್ದು ಗಾಯ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಣ್ಣ ಕಿರಾಣಿ ಅಂಗಡಿ ತುಮಕುಂಟಾದಲ್ಲಿ ನಡೆಸುತ್ತಿದ್ದೇನೆ. ನಾನು ಸಣ್ಣ ಕಿರಾಣಿ ಅಂಗಡಿ ನಡೆಸಲು ಪರವಾನಿಗೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಅಪಘಾತ ಆದಾಗ ನನಗೆ 36 ವರ್ಷ ವಯಸ್ಸಾಗಿತ್ತು. ಅಪಘಾತ ಆದಾಗ ನನಗೆ 36 ವರ್ಷ ವಯಸ್ಸಾಗಿತ್ತು ಎಂದು ತೋರಿಸಲು ಆಧಾರ ಕಾರ್ಡ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಅಪಘಾತದ ಸಮಯದಲ್ಲಿ ಸಣ್ಣ ಕಿರಾಣಿ ಅಂಗಡಿ ಮಾಡುತ್ತಿದ್ದು ತಿಂಗಳಿಗೆ 20 ಸಾವಿರ ಗಳಿಸುತ್ತಿದ್ದೇ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-18 ನ್ನು ನಾನು

ಸೃಷ್ಟಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಕೆ.ಎ 32 ಇ.ಎಸ 1197 ಮೋಟರ ಸೈಕಲನಿಂದ ಯಾವುದೆ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ತಪ್ಪಿನಿಂದ ಆಗಿದ್ದರು ಸಹ ಈ ಪ್ರಕರಣ ಸಲ್ಲಿಸಿ ನಾನು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ವಿಮೆ ಕಂಪನಿಯವರು ಪರಿಹಾರದ ಹಣ ಕೊಡಲು ಬಾದ್ಯಸ್ತರಲ್ಲ ಎಂದರೆ ಸರಿಯಲ್ಲ. ಪರಿಹಾರದ ಹಣ ಪಡೆಯಲು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.